ಉದಯವಾಣಿ

## ಮಹಾರಾಷ್ಟ್ರ ರೀತಿ ರೈತರಿಗೆ 8 ತಾಸು ವಿದ್ಯುತ್

ಮಹಾರಾಷ್ಟ್ರದಲ್ಲಿ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ವಾರದ 6 ದಿನ ನಿರಂತರ 8 ಗಂಟೆ ವಿದ್ಯುತ್ ಪೂರೈಸಲಾಗುತ್ತದೆ. ವಾರದ ಕೊನೆಯಲ್ಲಿ ಒಂದು ದಿನ ಸಂಪೂರ್ಣವಾಗಿ ವಿದ್ಯುತ್ ಸ್ಥಗಿತ ಮಾಡಲಾಗುತ್ತದೆ. ರೈತರಿಗೆ ಈ ಮಾದರಿ ಅನುಕೂಲ ಎಂಬ ಮಾತಿದೆ. ರೈತರಿಗೆ ಈ ವ್ಯವಸ್ಥೆ ಅನುಕೂಲ ಎಂದಾದರೆ ನಮ್ಮ ರಾಜ್ಯದಲ್ಲೂ ಅದನ್ನೇ ಅನುಸರಿಸೋಣ. ಅದಕ್ಕಾಗಿ ಮೊದಲು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಇಂಡಿ ತಾಲೂಕಿನಲ್ಲೇ ಪ್ರಾಯೋಗಿಕವಾಗಿ ಇದನ್ನು ಅನುಷ್ಠಾನಗೊಳಿಸಿ. ಇದು ಯಶಸ್ವಿಯಾದಲ್ಲಿ ರಾಜ್ಯಕ್ಕೆ ವಿಸ್ತರಣೆ ಮಾಡೋಣ ಎಂದು ಹೆಸ್ಕಾಂ ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದರು.

**ವಿದ್ಯುತ್ ವ್ಯತ್ಯಯ ಬೇಡ:** ರೈತರಿಗೆ ಸಿಗದ ಮಾಡಿದಂತೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಬಾರದು. ಒಂದು ದಿನ ವಿದ್ಯುತ್ ಉಳಿತಾಯ ಮಾಡಿ ಮರುದಿನ ಪೂರ್ಣ ಪ್ರಮಾಣದಲ್ಲಿ ರೈತರಿಗೆ ಸರಬರಾಜು ಮಾಡುವ ವ್ಯವಸ್ಥೆ ಮಹಾರಾಷ್ಟ್ರದಲ್ಲಿದೆ. ಅದೇ ಮಾದರಿಯನ್ನು ಇಂಡಿ ತಾಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತನ್ನಿ ಎಂದು ಸೂಚಿಸಿದರು.

ರಾಮನಗರ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿರುವ ಉದ್ಯೋಗ ಖಾತ್ರಿ ಯೋಜನೆಯನ್ನು ವಿಜಯಪುರ ಜಿಲ್ಲೆಯಲ್ಲೂ ಅಳವಡಿಸಿಕೊಳ್ಳಿ ಎಂದರು. ದ್ರಾಕ್ಷಿ ಬೆಳೆಗಾರರು ಸೇರಿ ವಿವಿಧ ರೈತ ಸಂಘಟನೆಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಅವರ ಅಹವಾಲು ಆಲಿಸಿದರು.

## ಸಹಕಾರಕ್ಕೆ 1463 ಕೋಟಿ ರೂ.

- 2016-17ನೇ ಸಾಲಿನಲ್ಲಿ 23 ಲಕ್ಷ ರೈತರಿಗೆ 11 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಿಸುವ ಗುರಿ.
- ಉಗ್ರಾಣ ನಿಗಮದ ಗೋದಾಮುಗಳ ಮೇಲ್ಛಾವಣಿಗಳ ಮೇಲೆ 1.8 ಕೋಟಿ ಚ.ಅಡಿ ವಿಸ್ತೀರ್ಣದ ಸೌರಶಕ್ತಿ ಪ್ಯಾನಲ್‌ಗಳನ್ನು ಅಳವಡಿಸಿ 150 ಮೆ.ವ್ಯಾ. ವಿದ್ಯುತ್ ಉತ್ಪಾದಿಸಲು ಖಾಸಗಿ ಸಹಭಾಗಿತ್ವ ಮತ್ತು ಬಂಡವಾಳದೊಂದಿಗೆ ಯೋಜನೆ.
- ಎಪಿಎಂಸಿಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು 1ರಿಂದ 3ಕ್ಕೆ ಹೆಚ್ಚಿಸಲು ಉದ್ದೇಶ.